# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 10 | Pages. 2 | Date: 04-12-2025, THURSDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 10 – ಪುಟಗಳು : 2 | 04-12-2025 ಗುರುವಾರ | Ph: 8762954248 | ದರ : ₹1


# ನೊಂದವರ ಹಕ್ಕು ರಕ್ಷಣೆ ವಕೀಲರ ಧ್ಯೇಯವಾಗಲಿ

## ಹೈಕೋರ್ಟ್ ನ್ಯಾಯಾಧೀಶ ಸಂದೇಶ್ | ಹಾಸನದಲ್ಲಿ ವಕೀಲರ ದಿನಾಚರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜನರ ಹಕ್ಕುಗಳಿಗೆ ತೊಂದರೆ ಬಂದಾಗ ಸ್ವಾತಂತ್ರ್ಯ ಮತ್ತು ನ್ಯಾಯ ದೊರಕಿಸಿ ವೃತ್ತಿ ಸಾರ್ಥಕತೆ ಕಂಡುಕೊಳ್ಳುವುದು ವಕೀಲರ ಧರ್ಮವಾಗಬೇಕೆ ಹೊರತು ಹಣ ಗಳಿಕೆಯಲ್ಲ ಎಂದು ಹೈಕೋರ್ಟ್ ನ್ಯಾಯಾಧೀಶ ಹೆಚ್.ಪಿ.ಸಂದೇಶ್ ಹೇಳಿದರು.

ನಗರದ ಜಿಲ್ಲಾ ವಕೀಲರ ಸಂಘದ ಆವರಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಕೀಲರ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಯುವ ಜನಾಂಗ ಅತಿಯಾದ ಮೊಬೈಲ್ ಬಳಕೆಯಿಂದ ಅಮೂಲ್ಯ ಸಮಯವನ್ನು ಹಾಳು ಮಾಡಿಕೊಳ್ಳುತ್ತಿದೆ. ಈ ಕುರಿತು ಅರಿವು ಮೂಡಿಸುವ ಕೆಲಸ ಹೆಚ್ಚಬೇಕು ಎಂದು ಸಲಹೆ ನೀಡಿದರು.

ಹಣ ಗಳಿಕೆಯೇ ವಕೀಲರ ಆದ್ಯತೆಯಾಗಬಾರದು. ಅನ್ಯಾಯಕ್ಕೆ ಒಳಗಾದವರ ನೋವಿಗೆ ಬೆಳಕಾಗದಿದ್ದರೆ ವೃತ್ತಿಗೆ ಅಪಚಾರ ಮಾಡಿದಂತಾಗುತ್ತದೆ. ಯುವ ವಕೀಲರು ಅಧ್ಯಯನದಲ್ಲಿ ತೊಡಗಬೇಕು. ಪದವಿ ಪಡೆದಾಕ್ಷಣ ಹಣದ ಹಿಂದೆ ಬೀಳಬಾರದು. ಸರಸ್ವತಿಯ ಹಿಂದೆ ನೀವು ಬಿದ್ದರೆ ಲಕ್ಷ್ಮಿ ತಾನಾಗಿಯೇ ಬರುತ್ತದೆ. ಸಾಫ್ಟ್‌ವೇರ್ ಎಂಜಿನಿಯರ್‌ಗಳಿಗೆ ವಕೀಲರು ಹೋಲಿಕೆ




ಮಾಡಿಕೊಳ್ಳಬಾರದು. ಆರಂಭದ ನಾಲ್ಕೈದು ವರ್ಷ ಹಣವಿಲ್ಲದೆ ಕೆಲಸ ಮಾಡಬೇಕಾಗುತ್ತದೆ. ಜ್ಞಾನವಂತರಾದರೆ ಕೆಲಸ ಹಾಗು ಹಣ ಹಿಂಬಾಲಿಸಿ ಬರುತ್ತದೆ ಎಂದರು.

ಕಾನೂನು ಪಾಲನೆ ಬೆಂಚ್ ಮತ್ತು ಬಾರ್‌ನ ಧ್ಯೇಯವಾಗಿದೆ. ತನ್ನ ಹಕ್ಕುಗಳಿಗೆ ಚ್ಯುತಿ ಬಂದಾಗ ವ್ಯಕ್ತಿ ನ್ಯಾಯಾಲಯಕ್ಕೆ ಬರುತ್ತಾನೆ. ಅವನಿಗೆ ನ್ಯಾಯ ಒದಗಿಸಿಕೊಡುವುದು ನಮ್ಮ ಧರ್ಮ. ಪ್ರಪಂಚದ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ನಮ್ಮದಾಗಿದೆ. ಕಾನೂನು ಪಾಲನೆ ಕೇವಲ ನ್ಯಾಯಾಧೀಶರ ಕೆಲಸವಲ್ಲ. ವಕೀಲರು ತಮ್ಮ ಜವಾಬ್ದಾರಿ ಅರಿಯಬೇಕು. ವಕೀಲರ ಸಂಘಟನೆಗಳು ಒಳ್ಳೆಯ ವಕೀಲರ ರೂಪಿಸಬೇಕು. ಯಾವಾಗ ಒಳ್ಳೆಯ ವಕೀಲರನ್ನು ಕೊಡುಗೆಯಾಗಿ ನೀಡುತ್ತಿರೋ ಆವಾಗ ನ್ಯಾಯಯುತ ಆದೇಶ ನೀಡಲು ನ್ಯಾಯಾಧೀಶರಿಗೆ ನೆರವಾಗುತ್ತದೆ. ಆ ಮೂಲಕ ಸಂವಿಧಾನವನ್ನು ಪಾಲಿಸಿದಂತಾಗುತ್ತದೆ ಎಂದು ತಿಳಿಸಿದರು.

ಭಾರತದ ಮೊದಲ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ್ ಅವರ ಜನ್ಮ ದಿನವನ್ನು ವಕೀಲರ ದಿನವಾಗಿ ಆಚರಿಸಲಾಗುತ್ತದೆ. ರಾಜೇಂದ್ರ ಪ್ರಸಾದ್ ಅವರು ಕಾನೂನು ಪದವಿ ಪಡೆದರೂ ಬಿಹಾರದಲ್ಲಿ ವೃತ್ತಿ ಆರಂಭಿಸಲು ನ್ಯಾಯಾಲಯಗಳು ಇಲ್ಲದ ಕಾರಣಕ್ಕೆ ಕೊಲ್ಕತ್ತಾದಲ್ಲಿ ಕೆಲಸ ಮಾಡುತ್ತಾರೆ. ಬಿಹಾರದಲ್ಲಿ ನ್ಯಾಯಾಲಯ ಸ್ಥಾಪನೆಯಾದ ಬಳಿಕ ವಾಪಾಸ್ಸಾಗುತ್ತಾರೆ ಎಂದು ವಿವರಿಸಿದರು.

1885 ರಿಂದ ಮಹಾತ್ಮ ಗಾಂಧಿ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕುತ್ತಾರೆ. 1931ರಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲು ಸೇರುತ್ತಾರೆ. 1942 ಕ್ವಿಟ್ ಇಂಡಿಯಾ ಮೂವ್ ಮೆಂಟ್‌ನಲ್ಲಿ ಪಾಲ್ಗೊಂಡು ಜೈಲು ಸೇರುತ್ತಾರೆ. ಡಾ. ರಾಜೇಂದ್ರ ಪ್ರಸಾದ್ ಅವರು ಸ್ವಾತಂತ್ರ್ಯ ಹೋರಾಟಗಾರ, ವಿದ್ವಾಂಸ ಎಲ್ಲವೂ ಆಗಿದ್ದರು. ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರಿಗೆ ಕಾನೂನಾತ್ಮಕವಾಗಿ ಅನೇಕ ಸಲಹೆ ನೀಡಿದ್ದಾರೆ ಎಂದರು. ಸಂವಿಧಾನ ರಚನೆಯಲ್ಲಿ ಅವರು ನೀಡಿದ ಕೊಡುಗೆ ಅಪಾರವಾಗಿದೆ. ಸಂವಿಧಾನ ಕರಡು ರಚನಾ ಸಮಿತಿಯಲ್ಲಿ 398 ವಕೀಲರಿರುತ್ತಾರೆ. ಅದರಲ್ಲಿ ಇಬ್ಬರು ಮಹಿಳಾ ವಕೀಲರು ಇದ್ದರು. ರಾಷ್ಟ್ರ

> ತಮ್ಮಿಂದ ನ್ಯಾಯ ಕೊಡಿಸಲು ಸಾಧ್ಯವಿಲ್ಲ ಎಂಬುದು ಗೊತ್ತಾದರೆ ಆ ಕ್ಷಣವೇ ಕಕ್ಷಿದಾರರಿಗೆ ನಿಜಾಂಶ ಹೇಳಬೇಕು. ಹಣದಾಸೆಗೆ ಅವರ ಪರವಾಗಿ ಬಣ್ಣದ ಮಾತುಗಳನ್ನಾಡಿ ವೃತ್ತಿಗೆ ಕಳಂಕ ತರಬೇಡಿ.
>
> – ಹೆಚ್.ಪಿ.ಸಂದೇಶ್, ಹೈಕೋರ್ಟ್ ನ್ಯಾಯಾಧೀಶ



ಸ್ವಾತಂತ್ರ್ಯ ಹಾಗೂ ಸಂವಿಧಾನ ರಚನೆಯಲ್ಲಿ ವಕೀಲರ ಪಾತ್ರ ಹೆಚ್ಚಿದೆ ಎಂಬುದನ್ನು ಯಾವ ಕಾರಣಕ್ಕೂ ಮರೆಯಬಾರದೆಂದು ಕಿವಿಮಾತು ಹೇಳಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಕಾರ್ಲೆ ಮೊಗಣ್ಣಗೌಡ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವಕೀಲರ ದಿನಾಚರಣೆ ಪ್ರಯುಕ್ತ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆ ಆಯೋಜಿಸಲಾಗಿತ್ತು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಮಹಾಗಣಪತಿ ಪೂಜೆ ನೆರವೇರಿಸಲಾಯಿತು.

ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶೆ ಹೇಮಾವತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ, ನ್ಯಾಯಾಧೀಶರಾದ ದೇವರಾಜ್, ಶೀಲಾ, ಹಿದಾಯತ್, ಆನಂದ್, ರವಿ, ಪತ್ರಕರ್ತ ಶಶಿಧರ್ ಭಟ್, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಆರ್.ಒಂಬೇಶ್, ಉಪಾಧ್ಯಕ್ಷ ಎಂ.ಟಿ.ತಿಮ್ಮೇಗೌಡ, ಎ.ಜೆ.ರಘು, ಬಿ.ಚಂದ್ರಶೇಖರ್ ಇತರರಿದ್ದರು.

# ಸಿಎಸ್‌ಆರ್ ನಿಧಿ ಸದ್ಬಳಕೆಯಾಗಲಿ ಶಾಸಕ ಸಿಮೆಂಟ್ ಮಂಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು (ಸಿಎಸ್ ಆರ್) ಶಿಕ್ಷಣ, ಆರೋಗ್ಯ ಹಾಗೂ ಮೂಲಸೌಕರ್ಯ ವಲಯದ ಪ್ರಗತಿಗೆ ಬಳಕೆ ಮಾಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲೂಕಿನ ಮಗ್ಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಲ್ಲೂರು ಗ್ರಾಮದಲ್ಲಿ ಚಿಕ್ಕನಲ್ಲೂರು ವರೆಗಿನ ನೂತನ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಸರ್ಕಾರದಿಂದಲೇ ಎಲ್ಲ ಕಾಮಗಾರಿ ಮಾಡಲಾಗುವುದು. ಉದ್ಯಮ ವಲಯದ ಬೆಂಬಲವೂ ಬೇಕಾಗುತ್ತದೆ. ಉದ್ಯಮಿಗಳು ಸಿಎಸ್‌ಆರ್ ಮೂಲಕ ಕೈ ಜೋಡಿಸಬೇಕು. ಈ ನಿಟ್ಟಿನಲ್ಲಿ ನಿವೃತ್ತ ಚೀಫ್ ಕನ್ಸರ್ವೇಟಿವ್ ಆಫಿಸರ್ ಶಿವಣ್ಣ ನವರ ಶ್ರಮದಿಂದ ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್ ಕಂಪನಿಯ ಸಿ.ಎಸ್.ಆರ್ ಫಂಡ್‌ನಿಂದ ವೇ ಫಾರ್ ಲೈಫ್ ಎನ್.ಜಿ.ಒ ಮುಂದಾಳತ್ವದಲ್ಲಿ ಸುಮಾರು 1 ಕೋಟಿ ರೂ. ವೆಚ್ಚದಲ್ಲಿ ಒಂದೂವರೆ ಕಿ.ಮೀ. ನೂತನ ರಸ್ತೆ ಕಾಮಗಾರಿ ನಡೆಯಲಿದೆ. ಸಾಮಾಜಿಕ ಹೊಣೆಗಾರಿಕೆ ನಿಧಿಯ ಕುರಿತು ಅಧಿಕಾರಿಗಳು ಮಾಹಿತಿ ಪಡೆದು ಕಾರ್ಪೊರೇಟ್ ಕಂಪನಿಗಳ ಮೂಲಕ ಮೂಲಸೌಕರ್ಯ ಅಭಿವೃದ್ಧಿಗೆ ಮುಂದಾಗುವಂತೆ ತಿಳಿಸಿದರು.

ಗ್ರಾಮದಲ್ಲಿರುವ ಮುಜುರಾಯಿ ಇಲಾಖೆಯ ಚನ್ನಕೇಶವಸ್ವಾಮಿ ದೇವಸ್ಥಾನದಲ್ಲಿ ನಿತ್ಯ ಪೂಜೆ ನಡೆಯುತ್ತಿಲ್ಲ ಎಂದು ಗ್ರಾಮಸ್ಥರು ಶಾಸಕರ ಗಮನ ತಂದರು. ಅದಕ್ಕೆ ಸ್ಪಂದಿಸಿದ ಶಾಸಕರು ಕೂಡಲೇ ಖಾಸಗಿ ತಹಸೀಲ್ದಾರ್ ಅವರಿಗೆ ದೂರವಾಣಿ ಕರೆ ಮಾಡಿ ಮಾಹಿತಿ ಪಡೆದರು.

ಪರಿಸರವಾದಿ ಹೆಮ್ಮಿಗೆ ಮೋಹನ್, ಹರೀಶ್, ರಾಜಶೇಖರ್, ಯೋಗೇಶ್, ಮುಖಂಡರಾದ ಲಿಖಿತ್, ಅಬ್ಬನ ಕೃಷ್ಣಮೂರ್ತಿ, ಪೂವಯ್ಯ ಚೇತನ್, ವಿಜಯಕುಮಾರ್, ರವಿಕುಮಾರ್, ದಿನೇಶ್, ಪಿಡಿಓ ಪರಮೇಶ್ ಮತ್ತು ಇತರರಿದ್ದರು.

# ಜಿಲ್ಲೆಯ ಅಭಿವೃದ್ಧಿಗೆ ಸರ್ಕಾರದ ಕೊಡುಗೆ ಶೂನ್ಯ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಅಭಿವೃದ್ಧಿಗೆ ಯಾವುದೇ ಅನುದಾನ ನೀಡದ ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಸಂಪುಟದ ಸದಸ್ಯರು ಹಾಸನಕ್ಕೆ ಬರುತ್ತಿರುವುದು ಹಾಸ್ಯಾಸ್ಪದ ಎಂದು ಬಿಜೆಪಿ ಮುಖಂಡ ದೇವರಾಜೇಗೌಡ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಜಿಲ್ಲೆಗೆ ಇವರ ಕೊಡುಗೆ ಏನು, ಏನು ಸಾಧನೆ ಮಾಡಿದ್ದಾರೆ. ಎಷ್ಟು ಅನುದಾನ ಕೊಟ್ಟಿದ್ದಾರೆ. ಇವರ ಅವಧಿಯಲ್ಲಿ ಏನೆಲ್ಲ ಅಭಿವೃದ್ಧಿ ಕೆಲಸ ಆಗಿವೆ ಎಂಬುದನ್ನು ಹೇಳಲಿ ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಜ್ವಲಂತ ಸಮಸ್ಯೆ ಇವೆ. ಬೆಳೆ ಪರಿಹಾರ ಕೊಟ್ಟಿಲ್ಲ, ಬೆಂಬಲ ಬೆಲೆ ಬೇಡಿಕೆಗೆ ಸ್ಪಂದಿಸಿಲ್ಲ ಎಂದು ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಕಬ್ಬು ಬೆಳೆಗಾರರ ಮೇಲೆ ಲಾಠಿ ಚಾರ್ಜ್ ಆಗಿದೆ.

ನಿರುದ್ಯೋಗ ನಿವಾರಣೆ ಇಲ್ಲ, ಆದರೆ ಸಿಎಂ–ಡಿಸಿಎಂ ಅವರು ಪರಸ್ಪರ ಬ್ರೇಕ್ ಫಾಸ್ಟ್ ಮೂಲಕ ಕಾಲಹರಣ ಮಾಡುತ್ತಿದ್ದಾರೆ ಎಂದು ಟೀಕಾ ಪ್ರಹಾರ ನಡೆಸಿದರು.

ಹಾಸನದ ನೂತನ ತಾಲೂಕು ಕಚೇರಿ, ಹೈಟೆಕ್ ಬಸ್ ನಿಲ್ದಾಣ ಬಳಿಯ ಉದ್ಯಾನ ವನ, ಅಗ್ನಿಶಾಮಕ ಠಾಣೆ, ಗ್ರಂಥಾಲಯ ಮಾಡಿದ್ದು ಬಿಜೆಪಿ ಸರ್ಕಾರ, ಸಿಎಂ ಕಾರ್ಯಕ್ರಮಕ್ಕೆ ಸುಮಾರು ನಾಲ್ಕು ಕೋಟಿ ಖರ್ಚಾಗುತ್ತಿದೆ. ಅಷ್ಟು ಅನುದಾನವನ್ನು ಜಿಲ್ಲೆಗೆ ಕೊಟ್ಟಿದ್ದಾರಾ ಹೇಳಲಿ, ಯಾವ ಮುಖ ಹೊತ್ತು ಸಿಎಂ ಹಾಸನಕ್ಕೆ ಬರುತ್ತಿದ್ದಾರೆ. ಅವರಿಗೆ ನೈತಿಕತೆ ಇದ್ದರೆ ಕಾರ್ಯಕ್ರಮ ರದ್ದುಪಡಿಸಬೇಕು. ಅದೇ ಹಣವನ್ನು ಕೆಲವು ಇಲಾಖೆ ಇಲಾಖೆಗಳಲ್ಲಿ ಸಂಬಳ ಆಗಿಲ್ಲ. ಅಲ್ಲಿಗೆ ಕೊಡಬೇಕು. ಮುಂದಿನ ದಿನಗಳಲ್ಲಿ ನಾಡಿನ ಜನ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ನಾಗರಾಜ್ ಇದ್ದರು.

# ಭೂ ಹಗರಣ: ವರ್ಷವಾದರೂ ತನಿಖೆ ಮಾಡದ ಸರ್ಕಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲೂಕಿನ ಚಿಕ್ಕಕೊಂಡಗೊಳ, ಎರೆಬರೆ ಕಾವಲು, ವಿಮಾನ ನಿಲ್ದಾಣ ಕಡೆಗಳಲ್ಲಿ ನೂರಾರು ಎಕರೆ ಸರ್ಕಾರಿ ಭೂಮಿಯನ್ನು ಕಾನೂನು ಬಾಹಿರವಾಗಿ ಖಾಸಗಿಯವರಿಗೆ ನೀಡಿದ್ದು, ಈ ಬಗ್ಗೆ ವರ್ಷದ ಹಿಂದೆಯೇ ಉನ್ನತ ಮಟ್ಟದ ತನಿಖೆ ನಡೆಸುವುದಾಗಿ ಹೇಳಿದ್ದ ಸರ್ಕಾರ, 1 ವರ್ಷ ಕಳೆದರೂ ಏನೂ ಮಾಡಿಲ್ಲ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಚಿಕ್ಕಕೊಂಡಗೊಳ ಸರ್ವೆ ನಂ.7/10/25/106/107 ಮತ್ತು 137 ರಲ್ಲಿ ಒಟ್ಟು 73.03 ಎಕರೆ ಜಮೀನನ್ನು 97 ಜನರಿಗೆ ಕಾನೂನು ಬಾಹಿರವಾಗಿ ಕಾಯಂ ಸಾಗುವಳಿ ಚೀಟಿ ನೀಡಿರುವ ಬಗ್ಗೆ ವರ್ಷದ ಹಿಂದೆಯೇ ಸದನದಲ್ಲಿ ದನಿ ಎತ್ತಿದ್ದೆವು. ಅದಾದ ಬಳಿ ತಂಡ ರಚಿಸಿ ತನಿಖೆ ಮಾಡಿಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವುದಾಗಿ



ಸ್ವತಃ ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಕಂದಾಯ ಸಚಿವರು ಭರವಸೆ ನೀಡಿದ್ದರು. ಆದರೆ ಒಂದು ವರ್ಷಗಳೇ ಕಳೆದಿದ್ದರೂ, ತಂಡಗಳು ಒಂದರಿಂದ ಮೂರು ಆಗಿವೆ ಹೊರತು ಲಾಭವಂತೂ ಆಗಲಿಲ್ಲ ಎಂದು ದೂರಿದರು.

ಚಿಕ್ಕಕೊಂಡಗೊಳ ಭಾಗದಲ್ಲಿ 1 ಎಕರೆ ಭೂಮಿಗೆ 12 ಕೋಟಿ ರೂ. ಬೆಲೆ ಇದೆ. ಸರ್ಕಾರದ ಆದೇಶ 1977ರ ಪ್ರಕಾರ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದ ಜನರಿಗೆ ಹಂಗಾಮಿ ಸಾಗುವಳಿ ಚೀಟಿಯನ್ನು 9 ಷರತ್ತು ವಿಧಿಸಿ ನೀಡಲಾಗಿದೆ. ಆದರೂ ಷರತ್ತು ಉಲ್ಲಂಘನೆ ಮಾಡಲಾಗಿದೆ ಎಂದರು.

ನಮ್ಮ ಹೋರಾಟ ಸರ್ಕಾರಿ ಭೂಮಿ ಉಳಿಯಬೇಕು ಎಂಬುದಾಗಿದೆ. ಅದಕ್ಕಾಗಿ ಜಿಲ್ಲೆಯ ನಾಲ್ವರು ಜೆಡಿಎಸ್ ಶಾಸಕರು, ಕಂದಾಯ ಸಚಿವರಿಗೆ ಲಿಖಿತವಾಗಿ ವರ್ಷದ ಹಿಂದೆ ದೂರು ನೀಡಿದ್ದೆವು.

ಸಣ್ಣಪುಟ್ಟದಕ್ಕೂ ಎಸ್‌ಐಟಿ ರಚನೆ ಮಾಡುವ ಸಿದ್ದರಾಮಯ್ಯ ಅವರು, ಡಿ.6 ರಂದು ಜಿಲ್ಲೆಗೆ ಆಗಮಿಸುತ್ತಿದ್ದು, ದೊಡ್ಡ ಹಗರಣದ ಬಗ್ಗೆ ದೊಡ್ಡ ಮಟ್ಟದ ತನಿಖಾ ತಂಡ ರಚಿಸಿ ತನಿಖೆ ಮಾಡಿಸುವ ಮೂಲಕ ತಪ್ಪಿತಸ್ಥ ಅಧಿಕಾರಿಗಳನ್ನು ಶಿಕ್ಷೆಗೆ ಗುರಿಪಡಿಸಬೇಕು ಎಂದು ಒತ್ತಾಯಿಸಿದರು. ಆ ಮೂಲಕ ಸದನದಲ್ಲೇ ಡಿಸಿಎಂ ಹಾಗೂ ಕಂದಾಯ ಸಚಿವರು ಸೂಕ್ತ ತನಿಖೆ ಮಾಡಿಸಿ ಅಗತ್ಯ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅವರೇ ಮಾಡಿದ್ದ ಆದೇಶದಂತೆ ನಡೆದುಕೊಳ್ಳಲಿ ಎಂದು ಮನವಿ ಮಾಡಿದರು. ರಾಯಚೂರು ಮಹಾನಗರ ಪಾಲಿಕೆಗೆ ಅನುದಾನ ನೀಡಿ ಹಾಸನವನ್ನು ನಿರ್ಲಕ್ಷಿಸಿರುವುದು ಖಂಡನೀಯ. ಈ ಬಗ್ಗೆ ಮುಖ್ಯಮಂತ್ರಿ ಅವರನ್ನೇ ಪ್ರಶ್ನಿಸಲಾಗುವುದು ಎಂದರು.

ಶಾಸಕ ಹೆಚ್.ಪಿ.ಸ್ವರೂಪ್ ಮಾತನಾಡಿ, ಹಾಸನ ಸುತ್ತಮುತ್ತ ರಿಯಲ್ ಎಸ್ಟೇಟ್ ದಂಧೆಕೋರರಿಗೆ, ಗಣಿಗಾರಿಕೆಗೆ ಅಕ್ರಮವಾಗಿ ಸರ್ಕಾರಿ ಭೂಮಿ ಮಂಜೂರು ಮಾಡಿರುವ ಬಗ್ಗೆ ಡಿ.8 ರಿಂದ ಆರಂಭವಾಗುವ ಚಳಿಗಾಲದ ಅಧಿವೇಶನದಲ್ಲಿ ದನಿ ಎತ್ತಿರುವುದಾಗಿ ತಿಳಿಸಿದರು.

ಕಳೆದ ವರ್ಷ ಚಿಕ್ಕಕೊಂಡಗೊಳ ಬಳಿ ಅನಧಿಕೃತ ಲೇಔಟ್ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತು ಮಾಡುವುದಾಗಿ ಹೇಳಿದ್ದರು. ವರ್ಷ ಕಳೆದರೂ ಆಗಿಲ್ಲ.

ಎರೆಬರೆ ಕಾವಲು ಬಳಿ ಏಕ ವ್ಯಕ್ತಿಗೆ ಗಣಿಗಾರಿಕೆ ನಡೆಸಲು 10 ಎಕರೆ ಎ ಖರಾಬ್ ಸರ್ಕಾರಿ ಭೂಮಿ ನೀಡಲಾಗಿದೆ ಎಂದು ದೂರಿದರು. ಈ ಬಗ್ಗೆ ತನಿಖೆ ನಡೆಯಬೇಕೆಂದು ಒತ್ತಾಯಿಸಿದರು. ರಿಂಗ್‌ರಸ್ತೆ ವ್ಯಾಪ್ತಿಯಲ್ಲಿ ರಾಜಕಾಲುವೆ ಒತ್ತುವರಿ ಮಾಡಿ ರಸ್ತೆ ಮಾಡಲಾಗಿದೆ. ಈ ಬಗ್ಗೆ ಎಡಿಎಲ್‌ಆರ್ ವರದಿ ನೀಡಿದ್ದರೂ, ಯಾವುದೇ ಕ್ರಮ ಆಗಿಲ್ಲ. ಡಿ.6 ರಂದು ಸಿಎಂ ಜಿಲ್ಲೆಗೆ ಬರುತ್ತಿದ್ದಾರೆ. ಆದರೆ 1 ರೂ. ಅನುದಾನ ಕೊಟ್ಟಿಲ್ಲ. ಹಿಂದೆ ನಮ್ಮ ಸರ್ಕಾರದ ಅವಧಿಯಲ್ಲಾದ ಯೋಜನೆಗಳ ಉದ್ಘಾಟನೆಗೆ ಬರುತ್ತಿದ್ದಾರೆ ಎಂದು ಟೀಕಿಸಿದರು.

# ಪರಿಸರ ಪ್ರೀತಿ ಮರೆತರೆ ಸಂಕಷ್ಟ ತಪ್ಪಿದ್ದಲ್ಲ: ಎಟಿಆರ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಯ ಪರಿಣಾಮಗಳಿಂದಾಗಿ ಜಗತ್ತಿನಾದ್ಯಂತ ಚಂಡಮಾರುತ, ಅಕಾಲಿಕ ಮಳೆ, ಅತಿವೃಷ್ಟಿ, ಮೇಘ ಸ್ಫೋಟ, ಭೂ ಕುಸಿತ, ಭೂಕಂಪ, ಅನಾವೃಷ್ಟಿ, ಹಿಮಗಡ್ಡೆ ಕರಗುವಿಕೆ ಇತ್ಯಾದಿ ಪ್ರಾಕೃತಿಕ ವಿಕೋಪಗಳು ಪದೇ ಪದೆ ಘಟಿಸಿ, ಸಮಸ್ತ ಜೀವ ಸಂಕುಲ ಸಂಕಷ್ಟಕ್ಕೆ ಸಿಲುಕುತ್ತಿದೆ ಎಂದು ಮಾಜಿ ಶಾಸಕ ಹಾಗೂ ಪರಿಸರಕ್ಕಾಗಿ ನಾವು ರಾಜ್ಯ ಸಂಘಟನೆ ಅಧ್ಯಕ್ಷ ಎ.ಟಿ. ರಾಮಸ್ವಾಮಿ ಆತಂಕ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ರಾಜ್ಯದಲ್ಲಿ ಹಲವು ಪರಿಸರ ಸಮಸ್ಯೆಗಳಿವೆ. ನಾಡಿನ ಬಹುತೇಕ ನದಿಗಳು ಕಲುಷಿತಗೊಂಡಿವೆ. ಮರಗಳ ಹನನ ಎಗ್ಗಿಲ್ಲದೆ ಸಾಗಿದೆ. ಗಣಿಗಾರಿಕೆ, ಹೋಂ ಸ್ಟೇ ನಿರ್ಮಾಣದಿಂದಾಗಿ ಗುಡ್ಡಗಳು ಕರಗುತ್ತಿವೆ. ವಿಪರೀತ ರಾಸಾಯನಿಕ ಬಳಕೆಯಿಂದ ಮಣ್ಣು, ಆಹಾರ ವಿಷವಾಗುತ್ತಿದೆ. ಇಷ್ಟೆಲ್ಲಾ ಆದರೂ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಗಂಭೀರವಾಗಿ ಯೋಚಿಸುತ್ತಿಲ್ಲ ಎಂದು




## ಮಠಾಧೀಶರಿಗೆ ರಾಜಕೀಯ ಬೇಡ

ಮಠಾಧೀಶರು ಇಂಥವರು ಸಿಎಂ ಆಗಬೇಕು ಎಂದು ವಕಾಲತ್ತು ವಹಿಸುವುದಕ್ಕೆ ವಿರೋಧ ವ್ಯಕ್ತಪಡಿಸಿದ ಎಟಿಆರ್, ಮಠಾಧೀಶರು ಧಾರ್ಮಿಕ ಕೆಲಸ ಮಾಡಲಿ, ಅವರು ಯಾರ ಮೇಲೆಯೂ ಒತ್ತಡ ಹೇರುವುದು ಸರಿಯಲ್ಲ. ಯಾವುದೂ ಅತಿ ಬೇಡ, ಮಿತಿ ಇರಲಿ, ವ್ಯಕ್ತಿಪರ ನಿಲ್ಲೋದು ಸರಿಯಲ್ಲ ಎಂದರು.

ಮೊದಲೇ ರಾಜಕಾರಣ ಕೊಳಲಾಗಿದೆ. ಇಂತಹ ಸಂದರ್ಭದಲ್ಲಿ ಅವರವರ ಜಾತಿ ನಿಲ್ಲುವುದು ಒಳ್ಳೆಯ ಬೆಳವಣಿಗೆ ಅಲ್ಲ. ಇದರಿಂದ ಸಾಮಾಜಿಕ ಸಾಮರಸ್ಯ ಕದಡಲಿದೆ ಎಂದು ಪ್ರತಿಪಾದಿಸಿದರು. ಎಲ್ಲ ಮನುಷ್ಯರನ್ನು ಒಟ್ಟಿಗೆ ಕರೆದುಕೊಂಡು ಹೋಗುವುದು ನಿಜವಾದ ಧರ್ಮದ ಕೆಲಸ, ಅವರ ಶಕ್ತಿ ರಚನಾತ್ಮಕ ಕಾರ್ಯಗಳಿಗೆ ಬಳಕೆ ಆಗಲಿ ಎಂದು ಮನವಿ ಮಾಡಿದರು.

ಬೇಸರ ವ್ಯಕ್ತಪಡಿಸಿದರು.

ಪ್ರಾಣಿಗಳ ಮೇಲೆ ದಯೆ ಇರಲಿ ಅಂತಾರೆ, ರಕ್ಷಣೆ ಮಾಡೋ ಕೆಲಸ ಯಾರದ್ದು, ನಾವು ಅಭಿವೃದ್ಧಿ ವಿರುದ್ಧ ಇಲ್ಲ, ಪರಿಸರವೂ ಉಳಿಯಬೇಕು. ಮುಖ್ಯವಾಗಿ 8 ಜೀವ ವೈವಿಧ್ಯ ತಾಣಗಳಲ್ಲಿ ಮಳೆಕಾಡು, ದಕ್ಷಿಣ ಭಾರತದ ಜಲಗೋಪುರ ಎನಿಸಿಕೊಂಡಿರುವ ಪಶ್ಚಿಮ ಘಟ್ಟವೂ ಒಂದಾಗಿದೆ. ಎಷ್ಟೋ ನದಿಗಳಿಗೆ ಜೀವ ಸೆಲೆಯಾಗಿದೆ.ಇಲ್ಲೇ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಜಾರಿಗೆ ಸರ್ಕಾರಗಳು ಮುಂದಾಗಿರುವುದು ಖಂಡನೀಯ. ಈಗಾಗಲೇ ಎತ್ತಿನಹೊಳೆ ಯೋಜನೆ ಜಾರಿಯಿಂದ ಪಶ್ಚಿಮ ಘಟ್ಟವನ್ನು ಛಿದ್ರ ಗೊಳಿಸಲಾಗಿದೆ. ಪರಿಣಾಮ ವನ್ಯಜೀವಿಗಳು ಕಾಡಿನಿಂದ ನಾಡಿಗೆ ನುಗ್ಗುತ್ತಿವೆ. ಕೂಡಲೇ ಯೋಜನೆ ಅನುಷ್ಠಾನ ಕೈ ಬಿಟ್ಟು ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳ ಪಟ್ಟಿ ಸೇರಿರುವ ಪಶ್ಚಿಮಘಟ್ಟ ಉಳಿಸಬೇಕು ಎಂದು ಒತ್ತಾಯಿಸಿದರು.

ಪರಿಸರ ಉಳಿದರೆ ನಾವೆಲ್ಲ ಉಳಿಯುಲಿವೆ, ತ್ತುರ್ತಾಗಿ ಜನಪ್ರತಿನಿಧಿಗಳು, ಮಠಾಧೀಶರು, ಮಾಧ್ಯಮ, ವಿವಿಧ ಜನಸಂಘಟನೆಗಳು ಸೇರಿ ಪರಿಸರ ನಾಶದ ವಿಷಯವನ್ನು ಆದ್ಯತೆಯಾಗಿ ತೆಗೆದುಕೊಂಡು ಜಾಗೃತಿ ಜೊತೆಗೆ ಹಸಿರು ಸಂವರ್ಧನೆ ಮಾಡಬೇಕಿದೆ ಎಂದು ನುಡಿದರು.

ಸುದ್ದಿಗೋಷ್ಠಿಯಲ್ಲಿ ಆರ್.ಪಿ.ವೆಂಕಟೇಶಮೂರ್ತಿ, ರೂಪ ಹಾಸನ, ಪರಶುರಾಮೇಗೌಡ, ಎಂ.ಬಿ. ಗಿರಿಜಾಂಬಿಕಾ ಮೊದಲಾದವರಿದ್ದರು.

# ಸಕಲೇಶಪುರ: ರಸ್ತೆ ಕಾಮಗಾರಿಗೆ ಭೂಮಿ ಪೂಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಯಸಳೂರು ಹೋಬಳಿ ಉಚ್ಚಂಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕಂದೂರು ಗ್ರಾಮದಲ್ಲಿ ಬುಧವಾರ ಶಾಸಕ ಸಿಮೆಂಟ್ ಮಂಜು ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.

60 ಲಕ್ಷ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ, ಗ್ರಾಮೀಣ ಭಾಗಗಳಿಗೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಸುಗಮ ಸಂಚಾರ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಈ ರಸ್ತೆ ನಿರ್ಮಿಸಲಾಗುತ್ತಿದೆ. ಭಾಗದ ಸಮಗ್ರ ಅಭಿವೃದ್ಧಿಗೆ ಬದ್ಧವಿದ್ದು, ಹಂತ ಹಂತವಾಗಿ ಅಭಿವೃದ್ಧಿ ಕೆಲಸಗಳಿಗೆ ಚಾಲನೆ ನೀಡಲಾಗುತ್ತಿದೆ. ಗುತ್ತಿಗೆದಾರರು ಶೀಘ್ರವಾಗಿ ಗುಣಮಟ್ಟದಿಂದ ಕೂಡಿದ ಕಾಮಗಾರಿ ನಡೆಸುವಂತೆ ಸೂಚಿಸಿದರು. ಸ್ಥಳೀಯ ಮುಖಂಡರು, ಗ್ರಾಮಸ್ಥರು, ಅಧಿಕಾರಿಗಳು ಉಪಸ್ಥಿತರಿದ್ದರು.



## ಶಿಕ್ಷಕರ ಮನೆಯಲ್ಲಿ ಚಿನ್ನಾಭರಣ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲೂಕಿನ ಕಟ್ಟಾಯ ಗ್ರಾಮದ ಮನೆಯೊಂದಕ್ಕೆ ಹಾಡ ಹಗಲೇ ನುಗ್ಗಿರುವ ಕಳ್ಳರು 1.45 ಲಕ್ಷ ರೂ. ಬೆಲೆಯ ಚಿನ್ನಾಭರಣ ಕದ್ದಿದ್ದಾರೆ.

ನಗರದ ಖಾಸಗಿ ಶಾಲೆಯ ಶಿಕ್ಷಕರಾದ ಗೋಪಾಲಕೃಷ್ಣ ಮತ್ತು ಆಶಾ ಎಂಬುವವರ ಮನೆಯಲ್ಲಿ ಕಳ್ಳತನ ನಡೆದಿದೆ. ಡಿ. 1ರ ಸಂಜೆ 4 ಗಂಟೆಗೆ ಕೆಲಸ ಮುಗಿಸಿ ಮನೆಗೆ ಹೋದಾಗ ಬಿಗ ಮುರಿದಿರುವುದು ತಿಳಿದಿದೆ.

ಬೀರುವಿನಲ್ಲಿಟ್ಟಿದ್ದ 7 ಜೊತೆ ಚಿನ್ನದ ಓಲೆಗಳು, 1 ಒಂದು ಜೊತೆ ಚಿನ್ನದ ಮಾಟಿ, 1 ಚಿನ್ನದ ಉಂಗುರ, 5 ಜೊತೆ ಬೆಳ್ಳಿ ಕಾಲು ಚೈನ್, 2 ಮೊಬೈಲ್ ಮತ್ತು 64 ಸಾವಿರ ರೂ. ನಗದು ಕಳವು ಮಾಡಲಾಗಿದೆ. ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಮ್ಯಾಕ್ಸಿ ಕ್ಯಾಬ್ ಡಿಕ್ಕಿಯಾಗಿ ಗಾಯಗೊಂಡಿದ್ದ ಬೈಕ್ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಎಸ್.ಅಂಕನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರಾಜೇಗೌಡ ಮೃತರು. ಡಿ. 1ರ ರಾತ್ರಿ 11ರ ಸಮಯದಲ್ಲಿ ಬೈಕ್‌ನಲ್ಲಿ ಮನೆಗೆ ಹೋಗುತ್ತಿದ್ದಾಗ ಪೆದ್ದನಹಳ್ಳಿ ಗೇಟ್ ಸಮೀಪ ಎದುರುಗಡೆಯಿಂದ ಬಂದ ಮ್ಯಾಕ್ಸಿ ಕ್ಯಾಬ್ ಡಿಕ್ಕಿಯಾಗಿದೆ. ಗಂಭೀರ ಗಾಯಗೊಂಡಿದ್ದ ಅವರಿಗೆ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ವೈದ್ಯರ ಸಲಹೆ ಮೇರೆಗೆ ಮನೆಗೆ ಕರೆದುಕೊಂಡು ಹೋಗಲಾಗಿತ್ತು. ಡಿ. 2ರಂದು ನೋವು ಕಾಣಿಸಿಕೊಂಡ ಹಿನ್ನಲೆಯಲ್ಲಿ ಆಸ್ಪತ್ರೆಗೆ ಕರೆತರಲಾಯಿತಾದರೂ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹೊನ್ನಮಾರನಹಳ್ಳಿಯಲ್ಲಿ ಅಭಿವೃದ್ಧಿ ಮರೀಚಿಕೆ

## ಅವೈಜ್ಞಾನಿಕ ರಸ್ತೆ ಕಾಮಗಾರಿ । ಗ್ರಾಮಸ್ಥರ ಹಿಡಿಶಾಪ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಚನ್ನರಾಯಪಟ್ಟಣ: ತಾಲ್ಲೂಕಿನ ಹೊನ್ನಮಾರನಹಳ್ಳಿ ಗ್ರಾಮದಲ್ಲಿ ಮೂಲ ಸೌಕರ್ಯಗಳ ಕೊರತೆ ವಿಪರೀತವಾಗಿದ್ದು ಅಭಿವೃದ್ಧಿ ಎಂಬುದು ಮರೀಚಿಕೆಯಾಗಿದೆ.

ರಸ್ತೆ ಹಾಗು ಚರಂಡಿ, ಬೀದಿ ದೀಪಗಳಿಲ್ಲ. ದಶಕ ಕಳೆದರೂ ಸಮುದಾಯ ಭವನದ ಕಾಮಗಾರಿ ಪೂರ್ಣಗೊಂಡಿಲ್ಲ, ಸಾರಿಗೆ ಸಂಪರ್ಕವೂ ಇಲ್ಲ ಹೀಗೆ ಹತ್ತು ಹಲವಾರು ಸಮಸ್ಯೆಗಳ ಆಗರವಾಗಿದೆ. ನುಗ್ಗೇಹಳ್ಳಿ-ಬಾಗೂರು ಮಾರ್ಗದಲ್ಲಿರುವ ಈ ಗ್ರಾಮ 250 ಮನೆ ಹಾಗೂ 1150ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದೆ. ಹೋಬಳಿ ಕೇಂದ್ರ ನುಗ್ಗೇಹಳ್ಳಿಯಿಂದ ಕೂಗಳತೆ ದೂರದಲ್ಲಿದ್ದರೂ ಸೌಲಭ್ಯಗಳಿಲ್ಲದೆ ನರಳುತ್ತಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಮೂರು ಗ್ರಾಮ ಪಂಚಾಯಿತಿ ಸದಸ್ಯರನ್ನು ಗ್ರಾಮ ಒಳಗೊಂಡಿದೆ. ಗ್ರಾಮದ ಕೆಲ ಬೀದಿಗಳಿಗೆ ರಸ್ತೆ ನಿರ್ಮಾಣವಾಗಿಲ್ಲ. ಕೆಲವೆಡೆ ಚರಂಡಿಗಳಿದ್ದರೂ ಗಿಡ ಗಂಟಿಗಳು ಬೆಳೆದಿದ್ದು ತ್ಯಾಜ್ಯದಿಂದ ತುಂಬಿ ಹೋಗಿವೆ. ಬಹುತೇಕ ಬೀದಿಗಳಲ್ಲಿ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಮನೆ ಬಳಕೆ ಹಾಗು ಮಳೆ ನೀರು ಹರಿದು ಮುಖ್ಯ ರಸ್ತೆಯ ಮಧ್ಯೆಯೇ ಸಂಗ್ರಹವಾಗುತ್ತಿದೆ.

ಮುಖ್ಯ ರಸ್ತೆ ಸಂಪೂರ್ಣ ಗುಂಡಿಮಯವಾಗಿ ಕೊಳಚೆ ನೀರು ಸಂಗ್ರಹವಾಗಿ ಕೆಸರು ಗದ್ದೆಯಂತಾಗಿದೆ. ಪರಿಣಾಮ ಸಾರ್ವಜನಿಕರು ಹಾಗೂ ವಾಹನಗಳು ಸಂಚರಿಸಲಾಗದಷ್ಟು ಅವ್ಯವಸ್ಥೆ ಸೃಷ್ಟಿಯಾಗಿದೆ. ರಸ್ತೆ ಮಧ್ಯೆ ಕೊಳಚೆ ನೀರು ಸಂಗ್ರಹಗೊಂಡಿರುವ ಕಾರಣ ವಾಹನ ಸಂಚಾರಕ್ಕೆ ಹರಸಾಹಸ ಪಡಬೇಕಾಗಿದೆ. ರಸ್ತೆ ಮಧ್ಯೆ ಮಾರ್ಪಟ್ಟಿರುವ ಗುಂಡಿಗಳು ಕೊಳಚೆ ತುಂಬಿಕೊಂಡಿರುವುದರಿಂದ ಜನರಿಗೆ ಸರಿಯಾಗಿ ಗೋಚರಿಸದ ಕಾರಣ ಅಪಘಾತಗಳು ಸಂಭವಿಸುತ್ತಿದ್ದು ಮುಖ್ಯ ರಸ್ತೆಯು ಅಪಘಾತ ವಲಯವಾಗಿ ಮಾರ್ಪಟ್ಟಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

**ಸೊಳ್ಳೆಗಳ ಕಾಟ ವಿಪರೀತ:** ಕೆಲವೆಡೆ ಗಿಡ-ಗಂಟಿಗಳು ಬೆಳೆದು ಮಣ್ಣು ಹಾಗೂ ತ್ಯಾಜ್ಯದಿಂದ ತುಂಬಿರುವ ಚರಂಡಿಗಳನ್ನು ತೆರವುಗೊಳಿಸದ ಕಾರಣ ಅಲ್ಲಲ್ಲಿ ಕೊಳಚೆ ನೀರು ಸಂಗ್ರಹವಾಗಿದೆ. ಅನೈರ್ಮಲ್ಯ ತಾಣವಾಗಿ ಪರಿಣಮಿಸಿದೆ. ಸಂಜೆಯಾದರೆ ಮನೆಗಳಲ್ಲಿ ಸೊಳ್ಳೆಗಳ ಕಾಟ ತೀವ್ರವಾಗಿ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆಯೆಂದು ಗ್ರಾಮದ ಲಕ್ಷ್ಮಮ್ಮ ಆಕ್ರೋಶ ಹೊರಹಾಕಿದರು.

**ಕತ್ತಲೆಯ ಗೂಡಾದ ಗ್ರಾಮ:** ಬೀದಿ ದೀಪಗಳ ಬೆಳಕಿನ ವ್ಯವಸ್ಥೆ ಇಲ್ಲದ ಕಾರಣ ಸಂಜೆಯಾದರೆ ಗ್ರಾಮವೆಲ್ಲಾ ಕತ್ತಲೆಯ ಗೂಡಾಗುತ್ತದೆ. ಹೀಗಾಗಿ ರಾತ್ರಿ ವೇಳೆ ಸಾರ್ವಜನಿಕರು ತಿರುಗಾಡುವುದೇ ಕಷ್ಟಕರವಾಗಿದೆ. ಇತ್ತೀಚೆಗೆ ಕ್ಷೇತ್ರದ ಶಾಸಕರು ಗ್ರಾಮದ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳಡಿ 70 ಲಕ್ಷ ರೂ. ಅನುದಾನ ನೀಡಿದ್ದು ಸಮರ್ಪಕವಾಗಿ ಬಳಕೆಯಾಗದೆ ಕಾಮಗಾರಿಗಳನ್ನು ಸಹ ವೈಜ್ಞಾನಿಕವಾಗಿ ಕೈಗೊಳ್ಳದ ಕಾರಣ ಅನುದಾನವು ವ್ಯರ್ಥವಾಗಿದೆ. ಅನುದಾನವನ್ನು ಬಳಸಿಕೊಂಡು ಕಾಂಕ್ರೀಟ್ ರಸ್ತೆ ನಿರ್ಮಿಸಿದರೂ ಸಹ ಚರಂಡಿ ನಿರ್ಮಿಸದ ಕಾರಣ ಕಾಂಕ್ರೀಟ್ ರಸ್ತೆಯ ಮೇಲೆಯೇ ಮನೆ ಬಳಕೆ ಹಾಗೂ ಮಳೆ ನೀರು ಮುಖ್ಯ ರಸ್ತೆ ಸೇರುತ್ತಿದೆ. ಅದರಿಂದ ಬಾಗೂರು-ನುಗ್ಗೇಹಳ್ಳಿ ಮುಖ್ಯ ರಸ್ತೆಯು ಹಾಳಾಗಿದ್ದು ಪ್ರಯಾಣಿಕರು ಹಿಡಿಶಾಪ ಹಾಕುತ್ತಿದ್ದಾರೆ.


**ಕಾಮಗಾರಿ ಪೂರ್ಣಗೊಳ್ಳದ ಭವನ:** ಕಳೆದ 10 ವರ್ಷಗಳ ಹಿಂದೆ ಮದುವೆ ಹಾಗೂ ಇತರ ಶುಭ ಸಮಾರಂಭಗಳ ಸಲುವಾಗಿ ಸಂಸದರ ನಿಧಿಯಿಂದ 10 ಲಕ್ಷ ರೂ. ಅನುದಾನ ಹಾಗು ಗ್ರಾಮಸ್ಥರ ಸಹಕಾರದೊಂದಿಗೆ ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿ ಪ್ರಾರಂಭಗೊಂಡಿತ್ತು. 10 ವರ್ಷ ಕಳೆದರೂ ಕಾಮಗಾರಿಯೂ ಪೂರ್ಣಗೊಂಡಿಲ್ಲ . ಅರ್ಧಕ್ಕೆ ಸ್ಥಗಿತಗೊಂಡಿರುವ ಪರಿಣಾಮ ಉದ್ಘಾಟನೆಯ ಭಾಗ್ಯವೂ ಸಹ ಭವನಕ್ಕೆ ಇಲ್ಲದಾಗಿದೆ.

**ಸೂಕ್ತ ಸಾರಿಗೆ ವ್ಯವಸ್ಥೆ ಇಲ್ಲ:** ಬಾಗೂರು ಹಾಗೂ ನುಗ್ಗೇಹಳ್ಳಿ ಎರಡು ಗ್ರಾಮಗಳು ಹೋಬಳಿ ಕೇಂದ್ರಗಳಾಗಿದ್ದು ನಡುವೆ ಸೂಕ್ತ ಹಾಗೂ ವ್ಯವಸ್ಥಿತವಾದ ಸಾರಿಗೆ ಬಸ್ ಸಂಚಾರ ಇಲ್ಲ. ಬೆಳಿಗ್ಗೆ 9 ಹಾಗು ಸಂಜೆ 4.30ರ ಸಮಯದಲ್ಲಿ ಒಂದು ಸಾರಿಗೆ ಬಸ್ ಹೊರತುಪಡಿಸಿದರೆ ಉಳಿದಂತೆ ಬಸ್ ಗಳ ಸಂಚಾರ ಇಲ್ಲದಾಗಿದೆ. ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಅಗತ್ಯ ಸಮಯಗಳಲ್ಲಿ ಬಸ್ ಸಂಚಾರ ಪ್ರಾರಂಭವಾಗಬೇಕಿದೆ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಇತ್ತ ಗಮನಹರಿಸಿ ಗ್ರಾಮದ ಸಮಸ್ಯೆಗಳನ್ನು ಬಗೆಹರಿಸಬೇಕೆಂಬ ಒತ್ತಾಯ ಕೇಳಿಬಂದಿದೆ.

> ಈಗಾಗಲೇ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿದೆ. ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಗ್ರಾಮದ 3 ಬೀದಿಗಳ ಕೊಳಚೆ ನೀರು ಹರಿದು ಬಾಗೂರು-ನುಗ್ಗೇಹಳ್ಳಿ ಮುಖ್ಯ ರಸ್ತೆಯ ಮೇಲೆ ಸಂಗ್ರಹವಾಗುತ್ತಿರುವ ಪರಿಣಾಮ ರಸ್ತೆ ಹಾಳಾಗಿದೆ. ಚರಂಡಿಗಳ ನಿರ್ವಹಣೆ ಮಾಡಲು ಗ್ರಾಮ ಪಂಚಾಯಿತಿ ಸದಸ್ಯರಿಗೆ ತಿಳಿಸಲಾಗಿದೆ. ಸದ್ಯದಲ್ಲೇ ಚರಂಡಿ ವ್ಯವಸ್ಥೆಯೊಂದಿಗೆ ಪೈಪ್ ಅಳವಡಿಸುವ ಮೂಲಕ ಸಮಸ್ಯೆ ಬಗೆಹರಿಸಲಾಗುವುದು.
>
> **– ಮಂಜಣ್ಣಗೌಡ, ಇಂಜಿನಿಯರ್, ಪಿಡಬ್ಲ್ಯೂಡಿ ಚನ್ನರಾಯಪಟ್ಟಣ**



> ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದೆ ಮನೆ ಬಳಕೆ ಹಾಗು ಮಳೆ ನೀರು ಮುಖ್ಯ ರಸ್ತೆಗೆ ಹರಿಯುತ್ತಿದ್ದು ರಸ್ತೆ ಹಾಳಾಗುವುದರ ಜೊತೆಗೆ ಅಪಘಾತದ ವಲಯವಾಗಿ ಮಾರ್ಪಟ್ಟಿದೆ. ಸೂಕ್ತ ನಿರ್ವಹಣೆ ಇಲ್ಲದ ಪರಿಣಾಮ ಗ್ರಾಮದಲ್ಲಿ ಅನೈರ್ಮಲ್ಯ ತಾಂಡವಾಡುತ್ತಿದ್ದು ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ.
>
> **– ಹೆಚ್.ಎನ್.ಸುರೇಶ್, ನಿವಾಸಿ**



## ಆಲೂರಿನಲ್ಲಿ ಅರ್ಥಪೂರ್ಣ ಹನುಮ ಜಯಂತಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ಪಟ್ಟಣದ ಹೌಸಿಂಗ್ ಬೋರ್ಡ್‌ನಲ್ಲಿರುವ ಅಭಯ ಆಂಜನೇಯಸ್ವಾಮಿ ದೇವಾಲಯದಲ್ಲಿ ಹನುಮ ಜಯಂತಿ ಅರ್ಥಪೂರ್ಣವಾಗಿ ಆಚರಣೆ ಮಾಡಲಾಯಿತು. ಸೋಮವಾರ ಸಂಜೆಯಿಂದ ಪೂಜಾ ವಿಧಿ ವಿಧಾನಗಳು ಪ್ರಾರಂಭವಾದವು. ಮಂಗಳವಾರ ಬೆಳಿಗ್ಗೆ 7 ಗಂಟೆಗೆ ಫಲ ಪಂಚಾಮೃತ ಅಭಿಷೇಕ ಮತ್ತು ರಜತ ಕವಚ ಹಾಗೂ ಪುಷ್ಪಾಲಂಕಾರ ಮಾಡಲಾಯಿತು. 11 ಗಂಟೆಗೆ ಮಹಾ ಮಂಗಳಾರತಿ ನೆರವೇರಿಸಲಾಯಿತು. ಸಾವಿರಾರು ಭಕ್ತರು ಸ್ವಾಮಿ ದರ್ಶನ ಪಡೆದು ಪುನೀತರಾದರು.

ಶಾಸಕರಾದ ಸಿಮೆಂಟ್ ಮಂಜು, ಹೆಚ್.ಪಿ.ಸ್ವರೂಪ್, ಮಾಜಿ ಶಾಸಕ ಹೆಚ್.ಕೆ. ಕುಮಾರಸ್ವಾಮಿ, ಚಂಚಲ ಕುಮಾರಸ್ವಾಮಿ ಮತ್ತು ಸ್ಥಳೀಯ ಜನಪ್ರತಿನಿಧಿಗಳು ಭಾಗವಹಿಸಿದ್ದರು. ಡೊಳ್ಳು ಕುಣಿತ, ಪೂಜಾ ಕುಣಿತ, ಕೀಲು ಕುದುರೆ, ಗುರುವಾಯನಕೆರೆ ಮಹಿಳೆಯರಿಂದ ಚಂಡೆವಾದ್ಯ, ನಾಗಸ್ವರ ವಾದ್ಯದೊಂದಿಗೆ ಶ್ರೀಯವರನ್ನು ಬೆಳ್ಳಿ ರಥದಲ್ಲಿ ಪಟ್ಟಣದಲ್ಲಿ ಮೆರವಣಿಗೆ ಮಾಡಲಾಯಿತು. ಸಂಜೆ ದೇವಸ್ಥಾನದ ಆವರಣದಲ್ಲಿ ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು.

## ಅಂಗನವಾಡಿ ಕಟ್ಟಡಕ್ಕೆ ಭೂಮಿಪೂಜೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ತಾಲ್ಲೂಕಿನ ಹಲಸಿನಹಳ್ಳಿ ಗ್ರಾಮದಲ್ಲಿ ನೂತನ ಅಂಗನವಾಡಿ ಕಟ್ಟಡಕ್ಕೆ ಶಾಸಕ ಹೆಚ್.ಪಿ.ಸ್ವರೂಪ್ ಬುಧವಾರ ಭೂಮಿಪೂಜೆ ನೆರವೇರಿಸಿದರು.

20 ಲಕ್ಷ ರೂ. ತಾಲ್ಲೂಕು ಪಂಚಾಯಿತಿ ಅನುದಾನದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣವಾಗುತ್ತಿದ್ದು ಅಭಿಮಾನಿಗಳು ಹಾಗೂ ಗ್ರಾಮಸ್ಥರು, ಇಲಾಖೆ ಅಧಿಕಾರಿಗಳ ಸಮ್ಮುಖದಲ್ಲಿ ಪೂಜೆ ನೆರವೇರಿಸಲಾಯಿತು. ಅಪಾರ ಸಂಖ್ಯೆಯ ಅಭಿಮಾನಿಗಳು ಶಾಸಕರನ್ನು ಸ್ವಾಗತಿಸಿ ಸನ್ಮಾನಿಸಿದರು. ಅಂಗನವಾಡಿ ಕಟ್ಟಡ ಮಕ್ಕಳ ವಿದ್ಯಾಭ್ಯಾಸದ ಉದ್ದೇಶದಿಂದ ನಿರ್ಮಾಣವಾಗುತ್ತಿದ್ದು ಗುಣಮಟ್ಟದ ಕಾಮಗಾರಿಯೊಂದಿಗೆ ಸುಸಜ್ಜಿತವಾಗಿ ನಿರ್ಮಿಸಬೇಕೆಂದು ಶಾಸಕ ಸ್ವರೂಪ್ ಗುತ್ತಿಗೆದಾರರಿಗೆ ಸೂಚನೆ ನೀಡಿದರು.

## ಮಕ್ಕಳನ್ನು ಹಿರಿಯರೊಂದಿಗೆ ಬೆರೆಯಲು ಬಿಡಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ಚಿಕ್ಕ ವಯಸ್ಸಿನಲ್ಲೆ ಮಕ್ಕಳನ್ನು ಮನೆಯಲ್ಲಿರುವ ಹಿರಿಯ ಪೋಷಕರೊಂದಿಗೆ ಬೆಳೆಸುವ ಪ್ರಯತ್ನವನ್ನು ಪ್ರತಿಯೊಬ್ಬ ಪೋಷಕರು ಮಾಡಬೇಕು ಎಂದು ಟೈಮ್ಸ್ ಶಿಕ್ಷಣ ಸಂಸ್ಥೆಯ ಟ್ರಸ್ಟಿ ಕೃಷ್ಣೇಗೌಡ ಹೇಳಿದರು.

ನಗರದ ವಿಜಯನಗರ ಬಡಾವಣೆಯಲ್ಲಿರುವ ಟೈಮ್ಸ್ ಅಂತಾರಾಷ್ಟ್ರೀಯ ಶಾಲೆಯಲ್ಲಿ ಈಚೆಗೆ ನಡೆದ ಗ್ರ್ಯಾಂಡ್ ಪೇರೆಂಟ್ಸ್ ಡೇ (ಅಜ್ಜ-ಅಜ್ಜಿಯ ದಿನಾಚರಣೆ) ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಪೋಷಕರು ತಮ್ಮ ಮಕ್ಕಳನ್ನು ಮನೆಯಲ್ಲಿರುವ ಹಿರಿಯ ಅಜ್ಜ-ಅಜ್ಜಿಯರೊಂದಿಗೆ ಬೆಳೆಸಿದರೆ ಮಕ್ಕಳು ಉತ್ತಮ ನಾಗರಿಕರಾಗಲು ಸಾಧ್ಯವಾಗುತ್ತದೆ. ಪೋಷಕರು ಅಜ್ಜ-ಅಜ್ಜಿಯರ ಒಡನಾಟದಲ್ಲಿ ಮಕ್ಕಳನ್ನು ಬೆಳೆಯಲು ಬಿಡುವುದರಿಂದ ಉತ್ತಮ ಸಂಸ್ಕಾರ ಕಲಿಯುತ್ತಾರೆ. ಅಜ್ಜ ಅಜ್ಜಿ ಹೇಳುವ ಕಥೆಗಳು ಮಕ್ಕಳನ್ನು ಸಮುದಾಯದ ನಿರ್ಮಾಣಕ್ಕೆ ದಾರಿ ದೀಪವಾಗುತ್ತದೆ. ಈ ಹಿಂದೆ ಅಜ್ಜ-ಅಜ್ಜಿಯರ ತಮ್ಮ ಮನೆಯಲ್ಲಿರುವ ಚಿಕ್ಕ ಮಕ್ಕಳಿಗೆ ದೇಶ ಪ್ರೇಮದ ಕಥೆ ಹಾಗೂ ರಾಜ್ಯವನ್ನಾಳಿದ ಮಹಾರಾಜರ ಮತ್ತು ಕಾಡಿನ ಕಥೆಗಳನ್ನು ಹೇಳುವ ಮೂಲಕ ಮಕ್ಕಳನ್ನು ಒಳ್ಳೆಯ ನಾಗರಿಕರನ್ನಾಗಿ ಮಾಡುತ್ತಿದ್ದರು. ಮನೆಯೇ ಮೊದಲ ಪಾಠ ಶಾಲೆ ಎಂಬುದಕ್ಕೆ ಇದು ಸಾಕ್ಷಿಯಾಗಿತ್ತು. ಆದರೆ ಇಂದು ಅಜ್ಜ-ಅಜ್ಜಿಯರು ಇಲ್ಲದಂತಾಗಿದ್ದು, ಕೇವಲ ಅಪ್ಪ ಅಮ್ಮ ಇಬ್ಬರೇ ಇರುತ್ತಾರೆ. ಮಕ್ಕಳು ಇಂದು ಮೊಬೈಲ್, ಟಿವಿ ಸಂಸ್ಕೃತಿಗೆ ಅಂಟಿಕೊಂಡಿದ್ದು, ಶಾಲೆಯಲ್ಲೂ ಕೇವಲ ಪಠ್ಯಕ್ಕೆ ಮಾತ್ರ ಸೀಮಿತರಾಗುತ್ತಿದ್ದಾರೆ. ನಮ್ಮ ಅವಿಭಕ್ತ ಕುಟುಂಬದ ಕಲ್ಪನೆ ತುಂಬ ಅದ್ಭುತವಾಗಿದ್ದು, ಇಂದಿಗೂ ಇಂತಹ ಕುಟುಂಬದ ವ್ಯವಸ್ಥೆ ಇದಿದ್ದರೆ ಚೆನ್ನಾಗಿರುತಿತ್ತು. ಅನಾಥಾಶ್ರಮಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಬೇಸರದ ಸಂಗತಿಯಾಗಿದೆ. ಮಕ್ಕಳು ಹಿರಿಯರಿಗೆ ಗೌರವ ಹಾಗೂ ಪ್ರೀತಿಯಿಂದ ನೋಡಿಕೊಳ್ಳುವ ಮನಸ್ಥಿತಿ ಇಲ್ಲದಂತಾಗಿದೆ ಎಂದರು.

ರಾಜ್ಯ ಸ್ಪಂದನ ಸಿರಿ ವೇದಿಕೆಯ ಸಂಸ್ಥಾಪಕಿ ಕಲಾವತಿ ಮಧೂಸುದನ್ ಮಾತನಾಡಿ, ಅಜ್ಜ ಅಜ್ಜಿಯರ ದಿನದಂತಹ ಕಾರ್ಯಕ್ರಮಗಳು ಇಂದಿನ ಪೀಳಿಗೆಯ ನಡುವೆ ಬಾಂಧವ್ಯವನ್ನು ಗಟ್ಟಿಗೊಳಿಸಲು ಮಹತ್ವದ ವೇದಿಕೆಯಾಗಿದೆ. ಅಜ್ಜ ಅಜ್ಜಿಯ ಅವರುಗಳು ಹೇಳುವ ಮಾತುಗಳು ಅವರ ಅನುಭವ ಮೌಲ್ಯಗಳು ಸಂಸ್ಕಾರಗಳು ದೊಡ್ಡ ಶಕ್ತಿ. ಇಂತಹ ಕಾರ್ಯಕ್ರಮಗಳು ಮಕ್ಕಳಲ್ಲಿ ಕೃತಜ್ಞತೆ ಮತ್ತು ಕುಟುಂಬವನ್ನು ಬಲಪಡಿಸುತ್ತದೆ ಎಂದರು.

ಶಾಲೆಯ ಮಕ್ಕಳಿಂದ ನೃತ್ಯ, ಹಾಡು ಹಾಗೂ ಹಿರಿಯರ ವೇಷಭೂಷಣ ಕಾರ್ಯಕ್ರಮ ನಡೆಸಿಕೊಡಲಾಯಿತು. ಮಾಜಿ ಸೈನಿಕ ಅಣ್ಣೇಗೌಡ, ಹಿರಿಯರಾದ ಜಯಲಕ್ಷ್ಮೀ ರಾಜಣ್ಣೇಗೌಡ, ಶಾಲೆಯ ಮುಖ್ಯ ಶಿಕ್ಷಕಿ ಬ್ಲೆಸ್ಸಿ ಶ್ಯಾಮ್, ಪೂರ್ವ ಪ್ರಾಥಮಿಕ ಶಾಲಾ ಸಂಯೋಜಕಿ ನಳಿನಾಕ್ಷಿ ಹಾಗೂ ಶಾಲೆಯ ಎಲ್ಲಾ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಕಾಡಾನೆಗಳ ನಿರಂತರ ದಾಳಿಗೆ ಅನ್ನದಾತ ಹೈರಾಣ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಬೇಲೂರು: ಮಲೆನಾಡು ಭಾಗದಲ್ಲಿ ಕಾಡಾನೆ ಹಾವಳಿಯಿಂದ ಬೆಳೆ ನಷ್ಟ ವರದಿಯಾಗುತ್ತಲೇ ಇದೆ. ಮಂಗಳವಾರ ಮಧ್ಯರಾತ್ರಿ 20 ಆನೆಗಳ ತಂಡ ನವಿಲಹಳ್ಳಿ ಸುತ್ತಲಿನ ಕಾಫಿ ತೋಟ ಮತ್ತು ಫಸಲಿಗೆ ಬಂದ ಮುಸುಕಿನ ಜೋಳವನ್ನು ಮನಬಂದಂತೆ ತಿಂದು ತುಳಿದು ಹಾಕಿದ್ದು, ರೈತರು ಸರ್ಕಾರ ಮತ್ತು ಸಂಬಂಧಪಟ್ಟ ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಳೆದ ಮೂರು ವರ್ಷದಿಂದ ತಾಲೂಕಿನ ಮಲೆನಾಡು ಭಾಗದ ಅರೇಹಳ್ಳಿ ಮತ್ತು ಬಿಕ್ಕೋಡು ಹೋಬಳಿ ವ್ಯಾಪ್ತಿಯಲ್ಲಿ 65ಕ್ಕೂ ಹೆಚ್ಚಿನ ಕಾಡಾನೆಗಳು ದಾಂಧಲೆ ನಡೆಸುತ್ತಿವೆ. ಸರ್ಕಾರ ಮತ್ತು ಅರಣ್ಯ ಇಲಾಖೆ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸದೆ ಇರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ.

ಕಳೆದ ವಾರದಿಂದ 20 ರಿಂದ 25ಕ್ಕೂ ಹೆಚ್ಚು ಕಾಡಾನೆಗಳು ಎಲ್ಲೆಂದರಲ್ಲಿ ದಾಳಿ ನಡೆಸುತ್ತಾ ಆತಂಕ ಮೂಡಿಸಿದೆ. ನವಿಲೆಹಳ್ಳಿ, ಮೈಲನಹಳ್ಳಿ ವ್ಯಾಪ್ತಿಯಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳು ಬೆಳೆಯನ್ನು ಸರ್ವನಾಶ ಮಾಡುವ ಜೊತೆಗೆ ಗ್ರಾಮ ಗ್ರಾಮಗಳಿಗೆ ನುಗ್ಗಿ ಸಾರ್ವಜನಿಕರಲ್ಲಿ ಭೀತಿ ಹುಟ್ಟಿಸಿವೆ. ಈಗಲಾದರೂ ಸರ್ಕಾರ ಮಲೆನಾಡು ರೈತರ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಲಿ ಎಂದು ಗ್ರಾಮಸ್ಥರು ಆಗ್ರಹಿಸಿದರು.

ತಾಲೂಕು ಕಾಫಿ ಬೆಳೆಗಾರರ ಸಂಘದ ಉಪಾಧ್ಯಕ್ಷ ವೆಂಕಟೇಶ, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಶಶಿಕುಮಾರ್ ಮಾತನಾಡಿ, ಸರ್ಕಾರ ಕೇವಲ ಕುರ್ಚಿ ಕಾದಾಟದಲ್ಲೇ ಮುಳುಗಿದ್ದು ರೈತರ ಸಮಸ್ಯೆ ಪರಿಗಣಿಸುತ್ತಿಲ್ಲ ಎಂದು ಆರೋಪಿಸಿದರು.

ಕಳೆದ ಮೂರು ವರ್ಷದಿಂದ ಮಲೆನಾಡು ಭಾಗದಲ್ಲಿ ಕಾಡಾನೆ ಸಮಸ್ಯೆ ಹೆಚ್ಚಾಗಿದ್ದು ಅಪಾರ ಪ್ರಮಾಣದ ಬೆಳೆ ನಷ್ಟ ಮತ್ತು ಹತ್ತಾರು ಜನರು ಆನೆ ತುಳಿತಕ್ಕೆ ಬಲಿಯಾಗಿದ್ದಾರೆ. ನೆಪ ಮಾತ್ರಕ್ಕೆ ಬಂದ ಅರಣ್ಯ ಸಚಿವ ಈಶ್ವರ್ ಖಂಡ್ರೆ ಇಲ್ಲಿವರೆಗೆ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಿಲ್ಲ. ಅವರಿಗೆ ಅರಣ್ಯ ಎಂದರೆ ಗೊತ್ತಿಲ್ಲ ಮತ್ತು ಮಲೆನಾಡು ಭಾಗದ ಜನರ ಕಷ್ಟ ಅರಿವಿಗೆ ಬರುವುದಿಲ್ಲ. ಕಳೆದ ರಾತ್ರಿ 20ಕ್ಕೂ ಅಧಿಕ ಕಾಡಾನೆಗಳು ನವಿಲೆಹಳ್ಳಿ ಸುತ್ತಮುತ್ತಲಿನ 50ಕ್ಕೂ ಹೆಚ್ಚು ಕಾಫಿ ತೋಟ ಸರ್ವ ನಾಶ ಮಾಡಿವೆ. ಫಸಲಿಗೆ ಬಂದ ಕಾಫಿ, ಅಡಿಕೆ, ಬಾಳೆ, ಮೆಣಸು ನೆಲಕಚ್ಚಿದೆ. ಮುಸುಕಿನ ಜೋಳದ ಹೊಲಕ್ಕೆ ನುಗ್ಗಿ ಮನಬಂದಂತೆ ತಿಂದು ಚೆಲ್ಲಾಪಿಲ್ಲಿ ಮಾಡಿವೆ. ಅರಣ್ಯ ಇಲಾಖೆಯ ಸಿಬ್ಬಂದಿ ಮಾತ್ರ ಮುಖ್ಯ ರಸ್ತೆಯಲ್ಲಿ ಕಾಲಹರಣ ಮಾಡುತ್ತಿದ್ದಾರೆ. ನಿತ್ಯ ಕಾಡಾನೆಗಳ ದಾಳಿಯಿಂದ ಕಾಫಿ ತೋಟಕ್ಕೆ ಕೂಲಿ ಕಾರ್ಮಿಕರು ಬರುತ್ತಿಲ್ಲ. ಹೀಗಾದರೆ ಹೇಗೆ ಫಸಲು ಕಟಾವು ಮಾಡುವುದು. ಮಲೆನಾಡು ಭಾಗದಲ್ಲಿ ಸಾವಿರಾರು ಕುಟುಂಬಗಳು ಕಾಫಿ ತೋಟವನ್ನು ನಂಬಿಕೊಂಡು ಬದುಕು ಸಾಗಿಸುತ್ತಿವೆ ಎಂದರು.

ಗ್ರಾಮಸ್ಥರಾದ ಕುಮಾರ್, ಸಂತೋಷ್, ರವಿ ದಿನೇಶ್ ಮತ್ತು ಪ್ರಸನ್ನ ಹಾಗೂ ಇತರರಿದ್ದರು.

## ಜಿಲ್ಲಾ ಪ್ರಥಮ ಕೇ.ಕ.ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಗ್ಯಾರಂಟಿ ರಾಮಣ್ಣ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ, ಜಿಲ್ಲಾ ಘಟಕ ಸಹಯೋಗದಲ್ಲಿ ಡಿ. 14ರ ಭಾನುವಾರ ಹಮ್ಮಿಕೊಂಡಿರುವ ಜಿಲ್ಲಾ ಪ್ರಥಮ ಕೇಂದ್ರ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ರಂಗಭೂಮಿ ಕಲಾವಿದ ಗ್ಯಾರಂಟಿ ರಾಮಣ್ಣ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ವೇದಿಕೆ ಸಂಸ್ಥಾಪಕ ಅಧ್ಯಕ್ಷ ಕೊಟ್ರೇಶ್ ಎಸ್. ಉಪ್ಪಾರ್ ತಿಳಿಸಿದ್ದಾರೆ.

ವೇದಿಕೆಯ ಗೌರವ ಸಲಹೆಗಾರ ನಾಗರಾಜ್ ಹೆತ್ತೂರು, ರಾಜ್ಯ ಕಾರ್ಯದರ್ಶಿ ಡಾ. ಪಿ.ದಿವಾಕರ ನಾರಾಯಣ, ರಾಜ್ಯ ಕೋಶಾಧ್ಯಕ್ಷ ಎಚ್.ಎಸ್.ಬಸವರಾಜ್, ರಾಜ್ಯ ಜಂಟಿ ಕಾರ್ಯದರ್ಶಿ ನಾಗರಾಜ ದೊಡ್ಡಮನಿ, ರಾಜ್ಯ ಸಂಘಟನಾ ಕಾರ್ಯದರ್ಶಿ ವಾಸು ಸಮುದ್ರವಳ್ಳಿ, ರಾಜ್ಯ ಸಹ ಕಾರ್ಯದರ್ಶಿ ದೇಸು ಆಲೂರು, ಸಾಮಾಜಿಕ ಹೋರಾಟಗಾರ ಮಲ್ನಾಡ್ ಮೆಹಬೂಬ್, ವೇದಿಕೆಯ ಜಿಲ್ಲಾ ಗೌರವಾಧ್ಯಕ್ಷ ವೈ.ಎಸ್.ರಮೇಶ್, ತಾಲ್ಲೂಕು ಅಧ್ಯಕ್ಷೆ ಕೆ.ಸಿ.ಗೀತಾ ಅವರನ್ನು ಒಳಗೊಂಡ ಸಮಿತಿ ಕಳೆದ ಐದು ದಶಕಗಳಿಂದ ಬೀದಿ ನಾಟಕ, ಹೋರಾಟ ಗೀತೆಗಳು, ರೈತ ಚಳವಳಿ, ದಲಿತ-ಬಂಡಾಯ ಚಳವಳಿಗಳಲ್ಲಿ, ರಂಗಭೂಮಿ, ಸಾಹಿತ್ಯ ಕ್ಷೇತ್ರದಲ್ಲಿ ನೂರಾರು ಹೋರಾಟ ಗೀತೆಗಳನ್ನು ಸ್ವತಃ ರಚಿಸಿ ಹಾಡುವುದರ ಮೂಲಕ ಸಕ್ರಿಯವಾಗಿ ಸೇವೆ ಸಲ್ಲಿಸುತ್ತಿರುವ ಗ್ಯಾರಂಟಿ ರಾಮಣ್ಣ ಅವರನ್ನು ಜಿಲ್ಲಾ ಪ್ರಥಮ ಕೇಂದ್ರ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ.

## ಯುವ ಕಾಂಗ್ರೆಸ್‌ನಿಂದ ವಿಕಲಚೇತನ ಮಕ್ಕಳಿಗೆ ಸಮವಸ್ತ್ರ ವಿತರಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಚನ್ನರಾಯಪಟ್ಟಣ: ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ತಾಲೂಕು ಯುವ ಕಾಂಗ್ರೆಸ್ ಸಮಿತಿಯು ಬರಗೂರು ಹ್ಯಾಂಡ್ ಪೋಸ್ಟ್‌ನಲ್ಲಿರುವ ವಿದ್ಯಾರಣ್ಯ ಸಂಸ್ಥೆಯ ಮಕ್ಕಳಿಗೆ ಸಮವಸ್ತ್ರ ವಿತರಿಸಿತು.

ಪಾಠ ಶಾಲೆಯಲ್ಲಿರುವ 40 ಮಕ್ಕಳಿಗೆ ತಾಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಎ.ಜೆ.ವೇಣುಗೋಪಾಲ್ ಮತ್ತು ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕಾರ್ತಿಕ್ ಮರುವನಹಳ್ಳಿ ನೇತೃತ್ವದಲ್ಲಿ ಯುವ ಕಾಂಗ್ರೆಸ್ ಪದಾಧಿಕಾರಿಗಳು ಮಕ್ಕಳಿಗೆ ಕೇಕ್ ತಿನ್ನಿಸಿ, ಟ್ರ್ಯಾಕ್ ಸಮವಸ್ತ್ರ ವಿತರಣೆ ಮಾಡಿದರು.

ಯುವ ಕಾಂಗ್ರೆಸ್ ಅಧ್ಯಕ್ಷ ಎ.ಜೆ. ವೇಣುಕುಮಾರ್ ಮಾತನಾಡಿ, ವಿಕಲಚೇತನರು ದೇವರ ಮಕ್ಕಳಿದ್ದಂತೆ. ಅವರ ಬಗೆ ಎಲ್ಲರೂ ಸಾಮಾಜಿಕ ಕಳಕಳಿ ಹೊಂದಬೇಕು, ಅವರಿಗೆ ಸಮಾನತೆ, ಸಾಮಾಜಿಕ ದೃಢತೆ, ಮಾನಸಿಕ ಧೈರ್ಯ ತುಂಬುವ ಕೆಲಸ ಎಲ್ಲರಿಂದಾಗಬೇಕು. ಸಮಾಜದಲ್ಲಿ ಅವರಿಗೆ ಇರುವ ಸೌಲಭ್ಯಗಳು ದೊರೆಯುವಂತಾಗಬೇಕು. ವಿಶ್ವ ವಿಕಲಚೇತನರ ದಿನಾಚರಣೆ ಕ್ರೀಡಾಕೂಟ ಹಮ್ಮಿಕೊಂಡಿದ್ದು ಈ ಹಿನ್ನೆಲೆಯಲ್ಲಿ 40 ಮಕ್ಕಳಿಗೆ ಟ್ರ್ಯಾಕ್ ಸೂಟ್ ವಿತರಣೆ ಮಾಡಲಾಗಿದೆ. ಎಲ್ಲ ಮಕ್ಕಳು ಕ್ರೀಡಾಕೂಟದಲ್ಲಿ ಭಾಗವಹಿಸಿ ಪ್ರಶಸ್ತಿ ತರುವಂತಾಗಬೇಕು. ಇಲ್ಲಿನ ಮಕ್ಕಳಿಗೆ ಅವಶ್ಯಕ ವಸ್ತುಗಳ ಅಗತ್ಯತೆ ತಿಳಿಸಿದರೆ ಯುವ ಕಾಂಗ್ರೆಸ್ ನೆರವು ನೀಡಲು ಸಿದ್ಧವಿದೆ. ವಿಕಲಚೇತನರನ್ನು ನಮ್ಮೊಳಗಿನ ಒಬ್ಬರನ್ನಾಗಿ ಕಾಣುವುದು ಆದ್ಯತೆಯಾಗಬೇಕು ಎಂದರು.

ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕಾರ್ತಿಕ್ ಮರುವನಹಳ್ಳಿ, ಚನ್ನರಾಯಪಟ್ಟಣ ಬ್ಲಾಕ್ ಉಪಾಧ್ಯಕ್ಷ ಸಚಿನ್, ಹಿರೀಸಾವೆ ಬ್ಲಾಕ್ ಮುಖಂಡ ನವೀನ್‌ಬಾಬು, ನವೀನ್ ವಳಗೇರಹಳ್ಳಿ, ಜೀವನ್, ವೇಣು, ಮಂಜುನಾಥ್, ಸಂತೋಷ್, ಉದ್ಯಮಿ ಅನಿಲ್‌ಕುಮಾರ್ ಹಾಗೂ ಇತರರಿದ್ದರು.

## ಇತಿಹಾಸದಲ್ಲಿ ಈ ದಿನ

### ಡಿಸೆಂಬರ್-04

**1971:** ಭಾರತ-ಪಾಕಿಸ್ತಾನ ಯುದ್ಧದ ಸಂದರ್ಭದಲ್ಲಿ ಭಾರತೀಯ ನೌಕಾಪಡೆಯ ಸಾಹಸಕ್ಕೆ ಸ್ಮರಣಾರ್ಥ ಭಾರತೀಯ ನೌಕಾಪಡೆಯ ದಿನವನ್ನು ಇದೇ ದಿನ ಆಚರಿಸಲಾಗುತ್ತದೆ.

**1959:** ವೈಸ್ ಅಡ್ಮಿರಲ್ ರಾಮ್ ದಾಸ್ ಕಟಾರಿ ಅವರು ಭಾರತದ ಮೊದಲ ನೌಕಾದಳಾಧ್ಯಕ್ಷರಾಗಿ ಅಧಿಕಾರ ಸ್ವೀಕಾರ.

**1985:** ಭಾರತ-ಭೂತಾನ್ ಸ್ನೇಹ ಮತ್ತು ಸಹಕಾರ ಒಪ್ಪಂದವನ್ನು ಇನ್ನಷ್ಟು ಬಲಪಡಿಸುವ ಕಾರ್ಯಗಳು ನಡೆಯಿತು.

**ಜನನ**

**1888:** ಕೈಗಾರಿಕಾ ಮಹನೀಯರು, ದಾನಶೂರ ಜಿ.ಡಿ. ಬೀರುಲಾ

**1932:** ವೈದ್ಯರು, ಸಾಹಿತ್ಯಾಸಕ್ತರು ಡಾ. ಹೂವಿನಹಳ್ಳಿ ನಾಗರಾಜ್

**ಮರಣ**

**1893:** ಸಮಾಜ ಸುಧಾರಕಿ ರಮಾಬಾಯಿ

## ಜಿಪಿಎಸ್ ವೆಕೇಶನ್ ವತಿಯಿಂದ ಕನ್ನಡ ರಾಜ್ಯೋತ್ಸವ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್


ಚನ್ನರಾಯಪಟ್ಟಣ: ಜಿಪಿಎಸ್ ವೆಕೇಶನ್ ವತಿಯಿಂದ ಕಂಪನಿ ನೂರು ವಾರಗಳ ಪೂರೈಸಿದ ಕಾರಣ ಹಾಗೂ ಕನ್ನಡ ರಾಜ್ಯೋತ್ಸವವನ್ನು ಬೆಂಗಳೂರಿನ ಮೈಸೂರು ರಸ್ತೆಯ ಕುಂಬಳಗೋಡು ಬಳಿ ಇರುವ ಗ್ರೀನ್ ಏಷ್ಯಾ ರೆಸಾರ್ಟ್‌ನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಂಪನಿಯ ಪ್ರಭುಶಂಕರ್ ಅವರು ದೀಪ ಬೆಳಗಿಸುವ ಮುಖಾಂತರ ಉದ್ಘಾಟಿಸಿದರು. ಈ ವಿಜಯೋತ್ಸವ ಕಾರ್ಯಕ್ರಮದಲ್ಲಿ ಕಂಪನಿಯ ಆನಂದ್ ರಾಣಿ ಹಾಗೂ ಕಂಪನಿಯ ಎಲ್ಲಾ ಸದಸ್ಯರು ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಹಾಸನ, ತುಮಕೂರು, ಮಂಡ್ಯ, ಮೈಸೂರ್, ಕೋಲಾರ, ಚಾಮರಾಜನಗರ ಜಿಲ್ಲೆಗಳಿಂದ ಹಾಗೂ ಹೊರ ರಾಜ್ಯಗಳಿಂದ ಸುಮಾರು 500ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದರು. ಚನ್ನರಾಯಪಟ್ಟಣ ಹಾಗೂ ನುಗ್ಗೇಹಳ್ಳಿಯಿಂದ 50ಕ್ಕೂ ಹೆಚ್ಚು ಸದಸ್ಯರು ಪಾಲ್ಗೊಂಡಿದ್ದರು. ಈ ಕಂಪನಿಯು ಒಂದೂವರೆ ವರ್ಷಗಳಲ್ಲಿ ತನ್ನದೇ ಆದ ಟೂರಿಸಂ ಅಲ್ಲಿ ಹೆಸರುವಾಸಿ ಪಡೆದುಕೊಂಡಿದೆ. ಈ ಕಂಪನಿಯು ಜನಸಾಮಾನ್ಯರಿಗೆ ರಿಯಾಯಿತಿ ದರದಲ್ಲಿ ಡೊಮೆಸ್ಟಿಕ್ ಇಂಟರ್ನ್ಯಾಷನಲ್ ಟ್ರಿಪ್ ಅನ್ನು ಆಯೋಜನೆ ಮಾಡಿಕೊಂಡು ಬರುತ್ತಿದೆ. ಈಗಾಗಲೇ ಎರಡು ಸಾವಿರ ಸದಸ್ಯರನ್ನು ಒಳಗೊಂಡು ತನ್ನದೇ ಆದ ಹೆಗ್ಗಳಿಕೆಯನ್ನು ಪಡೆದುಕೊಂಡಿದೆ. ಚೆನ್ನೈ ಆಂಧ್ರ ಹೊರ ರಾಜ್ಯಗಳಿಂದ ತನ್ನದೇ ಆದ ಸದಸ್ಯತ್ವವನ್ನು ಪಡೆದುಕೊಂಡಿದೆ ಈ ನೂರು ವಾರಗಳ ಸಂಭ್ರಮಾಚರಣೆಯಲ್ಲಿ ಎಲ್ಲಾ ಸದಸ್ಯರು ಭಾಗವಹಿಸಿದ್ದರು.

ತಾಲೂಕಿನ ಜಿತೇಂದ್ರ, ಕುಮಾರ್, ಶಿವಕುಮಾರ್, ವಿಶ್ವನಾಥ್, ರಂಗಸ್ವಾಮಿ, ಸುಮಿತ್ರ ಮತ್ತಿತರಿದ್ದರು.

## ನಿಯಂತ್ರಣ ತಪ್ಪಿ ಕೆರೆಗೆ ಬಿದ್ದ ಕಾರು: ಇಬ್ಬರು ಪಾರು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ : ಕಾರು ಚಾಲಕನ ನಿಯಂತ್ರಣ ತಪ್ಪಿ ಕೆರೆಗೆ ಬಿದ್ದಿದ್ದು, ಅದೃಷ್ಟವಶಾತ್ ಕಾರಿನಲ್ಲಿದ್ದ ಇಬ್ಬರು ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ನಗರದ ಹೊರವಲಯದ ಹರಳಹಳ್ಳಿಯಲ್ಲಿ ನಡೆದಿದೆ.

ಹರಳಹಳ್ಳಿ ಕೆರೆ ಸಮೀಪ ವೇಗವಾಗಿ ಬರುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ, ಏಕಾಏಕಿ ರಸ್ತೆಯಿಂದ ಕೆರೆಗೆ ಹಾರಿದೆ. ತಕ್ಷಣ ಕಾರಿನಲ್ಲಿದ್ದ ಇಬ್ಬರು ಹೊರ ಬಂದು ಜೀವ ಉಳಿಸಿಕೊಂಡಿದ್ದಾರೆ. ಕೆಲವೇ ಕ್ಷಣದಲ್ಲಿ ಕಾರು ಕೆರೆಯಲ್ಲಿ ಸಂಪೂರ್ಣ ಮುಳುಗಿದೆ. ಬಳಿಕ ಕ್ರೇನ್ ತರಿಸಿ, ಮುಳುಗಿದ್ದ ಕಾರನ್ನು ಮೇಲೆತ್ತಲಾಯಿತು. ಈ ದೃಶ್ಯವನ್ನು ನೋಡಲು ಜನರು ಜಮಾಯಿಸಿದ್ದರು.

ರಸ್ತೆ ಕಿರಿದಾಗಿದ್ದು, ಕೆರೆ ಏರಿಗೆ ತಡೆಗೋಡೆ ಇಲ್ಲದಿರುವುದರಿಂದ ಇಂತಹ ಅವಘಡಗಳು ಸಂಭವಿಸುತ್ತಿವೆ. ತಡೆಗೋಡೆ ನಿರ್ಮಾಣ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಇರುವರೆಗೂ ಯಾವುದೇ ಪ್ರಯೋಜನವಾಗಿಲ್ಲ. ಮುಂದಿನ ದಿನಗಳಲ್ಲಿ ದೊಡ್ಡ ಅವಘಡ ಸಂಭವಿಸುವ ಮೊದಲೇ ಸಂಬಂಧಪಟ್ಟವರು ಎಚ್ಚೆತ್ತುಕೊಂಡು ರಸ್ತೆ ಬದಿ ತಡೆಗೋಡೆ ನಿರ್ಮಾಣ ಮಾಡಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ವಾಹನ ಚಾಲಕರು ಕೂಡ ಎಚ್ಚರ ವಹಿಸಿ ನಿಧಾನಗತಿಯಲ್ಲಿ ವಾಹನ ಚಲಾಯಿಸಬೇಕೆಂದು ಸಲಹೆ ನೀಡಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248